# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ್ ಸಂಖ್ಯೆ: 196 (ಹಳೆಯ ವಾರ್ಡ್ ಸಂಖ್ಯೆ: 168 & 169)

**ದಿನಾಂಕ: 04.02.2023 ರಂದು ಹೊಸ ವಾರ್ಡ್ ಸಂಖ್ಯೆ 196 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆ.**

## -: ಸಮಿತಿ ಸಭೆಯ ನಡವಳಿಗಳು :-

ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ವಿಜಯ್‌ಕುಮಾರ.ಜಿ | JE, BESCOM |
| 03 | ಶ್ರೀಮತಿ ಪೂನಂ ಬಿ ಡಿ | ಹಿರಿಯ ಆರೋಗ್ಯ-169 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಕುಮಾರಿ ವಿಶಾಲಾಕ್ಷಿ ಬಂಡಿ | ಸಹಾಯಕ ಅಭಿಯಂತರರು ವಾರ್ಡ್ -168(ಹೊರಗುತ್ತಿಗೆ) |
| 05 | ಶ್ರೀಮತಿ ಸಿರಿಜಾ ಎಸ್ | AE BWSSB BYARASANDRA |
| 06 | ಶ್ರೀ ಗೌತಮ್.ವೈ | SWM-168 |
| 07 | ಶ್ರೀ ರಾಮಮೂರ್ತಿ ಕೆ.ಸಿ | Ward Marshal |
| 08 | ಡಾ. ಶರಣಪ್ಪ | MO, JAYANARAGAR |
| 09 | ಶ್ರೀ ರಮೇಶ.ಪಿ.ಬಿ | SWM-169 |
| 10 | ಶ್ರೀ ಸತೀಶ್ ಕೆ | Tilaknagar Police Station |
| 11 | ಶ್ರೀ ಅರ್ಜುನ್.ಕೆ.ಎಂ | Police Constable |
| 12 | ಶ್ರೀ ಭೀಮಣ್ಣ | Tilaknagar Police Station |
| 13 | ಶ್ರೀ ವಿಜಯಕುಮಾರ್ | Project – AE |
| 14 | ವಾರ್ಡ್ 196 ರ L.I.C ಕಾಲೋನಿ ಸ್ಥಳಿಯ ನಿವಾಸಿಗಳ ಸಂಘ ಹಾಗೂ 4ನೇ ಟಿ ಬ್ಲಾಕ್‌ನ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ್ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 18.01.2023 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ವಾರ್ಡ್ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿರುವ ಒಳಚರಂಡಿ ಮಾರ್ಗವು ಅನೇಕ ಬಾರಿ ಬ್ಲಾಕ್ ಅಗುತ್ತಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಮತ್ತು ಒಳಚರಂಡಿಯಲ್ಲಿರುವ ಹೂಳು (Silt) ಅನ್ನು ತೆರವುಗೂಳಿಸುವುದು ಮತ್ತು ತೆರವುಗೊಳಿಸಿರುವ Silt ಅನ್ನು BWSSB ಇಲಾಖೆ ವತಿಯಿಂದ ತೆರವುಗೊಳಿಸಲು ಕ್ರಮವಹಿಸಲು ಸಭೆಯಲ್ಲಿ ಕೋರಿದರು. (ಕ್ರಮ: ಸ.ಕಾ.ನಿ.ಅ , **BWSSB** ಇಲಾಖೆ ಜಯನಗರ)

Scanned with OKEN Scanner

3. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿರುವ ಕುಡಿಯುವ ನೀರಿನ ಪೈಪು ಹಳಾಗಿದ್ದು, ಇದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಆದ್ದರಿಂದ ಕುಡಿಯುವ ನೀರಿನ ಪೈಪ್ ಅನ್ನು ದುರಸ್ಥಿ ಮಾಡಲು ಮತ್ತು ಪಕ್ಕದಲ್ಲಿ ಹೂಸ ಕುಡಿಯುವ ನೀರಿನ ಪೈಪ್ ಅನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ , BWSSB ಇಲಾಖೆ ಜಯನಗರ)**

4. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿ 13ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾದಕ ವ್ಯಾಸನಗಳ ಚಟುವಟಿಕೆಗಳು ಮತ್ತು ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ/ತಿಲಕ್‌ನಗರ ಪೋಲಿಸ್ ಠಾಣೆ)**

5. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಹಿರಿಯ ನಾಗರೀಕರು ಸಾಯಂಕಾಲದ ಸಮಯದಲ್ಲಿ ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಅದಷ್ಟು ಬೇಗನೆ ನಕಲುಬಂಡೆ ಪ್ರದೇಶದಲ್ಲಿ ಹೂಸದಾಗಿ ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ(ವಿದ್ಯುತ್), ದಕ್ಷಿಣ, ಬಿಬಿಎಂಪಿ, ಜಯನಗರ)**

6. 5ನೇ ಮುಖ್ಯರಸ್ತೆಯಲ್ಲಿರುವ ಗಣೇಶ ದೇವಸ್ಥಾನ ಹಿಂದಗಡೆಯಲ್ಲಿರುವ ಖಾಲಿ ಜಾಗದಲ್ಲಿ ಕಸ ಸಂಗ್ರಹಣೆ ವಾಹನಗಳನ್ನು ನಿಲ್ಲಿಸಲು ಅವಕಾಶವಿದ್ದು, ಆದರೆ ಕಸದ ವಾಹನಗಳನ್ನು 2ನೇ ಅಡ್ಡರಸ್ತೆಯ ಎಲ್.ಐ.ಸಿ ಕಾಲೋನಿಯಲ್ಲಿರುವ ಬಿ.ಬಿ.ಎಂ.ಪಿ ಕಛೇರಿಯ ಹಿಂದಗಡೆಯಲ್ಲಿ ವಾಹನಗಳನ್ನು ಪಾರ್ಕ ಮಾಡುತ್ತಿದ್ದು, ಇದರಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ಕಸದ ವಾಹನಗಳಿಂದ ಬರುವ ವಾಸನೆ ಹಾಗೂ ಅಲ್ಲಿನ ಹಿರಿಯ ನಾಗರೀಕರಿಗೆ ಅನಾರೋಗ್ಯ ಸಮಸ್ಯೆಗಳು ಉಂಟಾಗುತ್ತಿರುತ್ತದೆ ಎಂದು ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ(SWM), ಜಯನಗರ ವಿಭಾಗ, ಬಿಬಿಎಂಪಿ)**

7. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನ ಮರಗಳು ಮತ್ತು ಅಕ್ಕ ಪಕ್ಕದ ರಸ್ತೆಗಳಲ್ಲಿರುವ ಮರದ ಒಣಗಿದ ಮತ್ತು ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ಪಾರ್ಕ ಮತ್ತು ರಸ್ತೆಗಳಲ್ಲಿರುವ ಮರದ ಉದ್ದವಾಗಿರುವ ಮತ್ತು ಒಣಗಿರುವ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

8. ವಾರ್ಡ 168 ರ ವ್ಯಾಪ್ತಿಯ 4ನೇ ಟಿ ಬ್ಲಾಕ್‌ನ, 26ನೇ ಮುಖ್ಯರಸ್ತೆಯಲ್ಲಿ SSMRV ಕಾಲೇಜಿನ ವಿದ್ಯಾರ್ಥಿಗಳು ದ್ವಿಚಕ್ರವಾಹಗಳಿಂದ Wheeling, Rash driving ಮಾಡುವುದು ಮತ್ತು ರಸ್ತೆಗಳಲ್ಲಿ Birthday ಅಚರಣೆ ಮಾಡುವುದು ಹಾಗೂ ಮಾದಕ ವ್ಯಾಸನಗಳ ಚಟುವಟಿಕೆಯನ್ನು ಮಾಡುತ್ತಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ/ತಿಲಕ್‌ನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

9. ವಾರ್ಡ 168 ರ ವ್ಯಾಪ್ತಿಯ 4ನೇ ಟಿ ಬ್ಲಾಕ್‌ನ, 26ನೇ ಮುಖ್ಯರಸ್ತೆಯಲ್ಲಿ ವಾಹನ ದಟ್ಟನೆ ಹೆಚ್ಚಾಗಿದ್ದು, ಅನಾಮಧೇಯ ವ್ಯಕ್ತಿಗಳಿಂದ ವಿಷ್ಣುವರ್ಧನ್ ಪಾರ್ಕನ ಸುತ್ತಲು ಇರುವ ರಸ್ತೆಗಳಲ್ಲಿ ವಾಹನ ಪಾರ್ಕಿಂಗ್‌ನಿಂದ ತುಂಬಾ ಟ್ರಾಫೀಕ್ ಸಮಸ್ಯೆಯಾಗುತ್ತಿದ್ದು. ಇದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

10. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿ, 13ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾದಕ ವ್ಯಾಸನಗಳ ಚಟುವಟಿಕೆಯನ್ನು ಮಾಡುತ್ತಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ/ತಿಲಕ್‌ನಗರ ಪೋಲಿಸ್ ಠಾಣೆ)**

Scanned with OKEN Scanner

11. ವಾರ್ಡ್ 169 ರ ವ್ಯಾಪ್ತಿಯ ಎಲ್.ಐ.ಸಿ ಕಾಲೋನಿಯ 3ನೇ ಮತ್ತು 4ನೇ ಅಡ್ಡರಸ್ತೆಯಲ್ಲಿರುವ ಒಳಚರಂಡಿ ಮಾರ್ಗದ, ಒಳಚರಂಡಿಯ ನೀರಿನ ಜೊತೆ ಮಳೆಯ ನೀರು ಮಿಶ್ರಣವಾಗುತ್ತಿದ್ದು ಮತ್ತು 1ನೇ ಮುಖ್ಯರಸ್ತೆಯ ಅಕ್ಸಿಸ್ ಬ್ಯಾಂಕ್ ಪಕ್ಕದಲ್ಲಿ ಒಳಚರಂಡಿ ಮಾರ್ಗವು ಅಗಾಗೆ ಬ್ಲಾಕ್ ಅಗುತ್ತಿದ್ದು. ಇದರೆ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ , BWSSB ಇಲಾಖೆ ಜಯನಗರ)**

12. ವಾರ್ಡ್ 169 ರ ವ್ಯಾಪ್ತಿಯ ಎಲ್.ಐ.ಸಿ ಕಾಲೋನಿಯ 2ನೇ ಅಡ್ಡರಸ್ತೆಯಲ್ಲಿರುವ ನಿವೇಶನದ ಖಾಲಿ ಜಾಗ (Empty site) ದಲ್ಲಿ ಗಿಡ ಮತ್ತು ಕಸದ ಪ್ರಮಾಣವು ಹೆಚ್ಚಾಗಿರುತ್ತದೆ. ಇದರಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು, ಜಯನಗರ, ಬಿಬಿಎಂಪಿ/ಸ.ಕಾ.ನಿ.ಅ , SWM ಇಲಾಖೆ ಜಯನಗರ)**

13. ವಾರ್ಡ್–196 (ಹೊಸ) ವ್ಯಾಪ್ತಿಯರಲ್ಲಿರುವ 10ನೇ ಅಡ್ಡರಸ್ತೆ ಪಾದಚಾರಿ(Footpath) ಮೇಲೆ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಒಡಡಲು ತುಂಬಾ ತೊಂದರೆಯಾಗುತ್ತಿದ್ದು. ಪ್ರಸುತ್ತ ಶೇಕಡ 50% ಅಷ್ಟು ಸಮಸ್ಯೆಯು ಕಡಿಮೆಯಾಗಿದ್ದು, ಇನ್ನು ಬಾಕಿ ಉಳಿದಿರುವ ವಾಹನಗಳ ಪಾರ್ಕಿಂಗ್ ಅನ್ನು ತರೆವುಗೊಳಿಸಲು ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

14. ವಾರ್ಡ್ 169 ರ ವ್ಯಾಪ್ತಿಯ ಎಲ್.ಐ.ಸಿ ಕಾಲೋನಿಯ 2ನೇ ಅಡ್ಡರಸ್ತೆಯಲ್ಲಿರುವ ಬಿಬಿಎಂಪಿ ಕಛೇರಿಯ ಪಕ್ಕದಲ್ಲಿರುವ ರಸ್ತೆಯಲ್ಲಿ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಡಲು ತೊಂದರೆಯಾಗುತ್ತಿದ್ದು. ಸದರಿ ರಸ್ತೆಯಲ್ಲಿ ನೋ ಪಾರ್ಕಿಂಗ್ (No Parking) ಬೋರ್ಡಗಳನ್ನು ಅಳವಡಿಸುವಂತೆಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

15. ವಾರ್ಡ ಸಂಖ್ಯೆ 169 ರಲ್ಲಿರುವ ಎಲ್.ಐ.ಸಿ ಪಾರ್ಕ್‌ನ ನಿರ್ವಹಣೆ ಕಾರ್ಯ ಮತ್ತು ಸ್ವಚ್ಚತೆಯ ಕೊರತೆ ಇದ್ದು ಮತ್ತು ಪಾರ್ಕ್ ನಿರ್ವಹಣೆ ಮಾಡುವವರು ಸರಿಯಾದ ಕ್ರಮದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ತೋಟಗಾರಿಕೆ ಇಲಾಖೆ (ದಕ್ಷಿಣ), ಜಯನಗರ & ಸ.ಕಾ.ನಿ.ಅ ಯೋಜನೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು,
ವಾರ್ಡ್–168(ಹೂರಗುತ್ತಿಗೆ)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ–196 ಬೈರಸಂದ್ರ (ಹಳೆಯ ವಾರ್ಡ 168&169)

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with OKEN Scanner